ಬೇಗ ಮಾಡುತ್ತೇನೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಸಿ.ನಾಣಯ್ಯ (ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ 18ನೇ ಜುಲೈ 1996ರ ಹತ್ತನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 67 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ಹುಬ್ಬಳ್ಳಿ ನಗರದಲ್ಲಿ ಜವಳಿ ನಗರ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 490 (898 (ಎ))

ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿ ಮಹದೇವ ಜವಳಿ ಗಿರಣಿಗೆ ಕಾಯಕಲ್ಪ ನೀಡಲು ಸರ್ಕಾರದವರು ಪರಿಶೀಲಿಸುವುದೇ

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಎಸ್.ಪಾಟೀಲ್ (ಜವಳಿ ಸಚಿವರು):-

ಅ) ಹೌದು.

ಆ) ಹುಬ್ಬಳ್ಳಿಯ ಮಹದೇವ ಜವಳಿ ಗಿರಣಿಯು ಕಳೆದ ಅನೇಕ ವರ್ಷಗಳಿಂದ ನಷ್ಟವನ್ನು ಅನುಭವಿಸುತ್ತಿದ್ದುದರಿಂದ, ಕರ್ನಾಟಕ ರಾಜ್ಯ ಜವಳಿ ನಿಯಮಿತವು (ಮಹದೇವ ಜವಳಿ ಗಿರಣಿಯ ಹೋಲ್ಡಿಂಗ್ ಕಂಪನಿ) ಸಿಕ್ ಇಂಡಸ್ಟ್ರೀಯಲ್ ಕಂಪನೀಸ್ (ಸ್ಪೆಷಲ್ ಪ್ರೊವಿಜನ್ಸ್) ಕಾಯಿದೆ 1985 ಕಲಂ 15ರ ಅನ್ವಯ ಅರ್ಜಿಯನ್ನು ಗಿರಣಿಯ ಪುನರುಜ್ಜೀವನಕ್ಕಾಗಿ ಬಿ.ಐ.ಎಫ್.ಆರ್.ಗೆ ಫೆಬ್ರವರಿ 1995ರಲ್ಲಿ ಸಲ್ಲಿಸಿದೆ. ಬಿ.ಐ.ಎಫ್.ಆರ್. ಸಂಸ್ಥೆ ಗಿರಣಿಯ ಪುನರುಜ್ಜೀವನದ ಬಗ್ಗೆ ಇನ್ನೂ ನಿರ್ಧಾರ ಕೈಗೊಳ್ಳಬೇಕಾಗಿರುತ್ತದೆ. ಸದರಿ ಸಂಸ್ಥೆಯ ಆದೇಶದಂತೆ ಸರ್ಕಾರ ಕ್ರಮ ಕೈಗೊಳ್ಳಲಾಗಿದೆ.

ವಿಷಯ:- ಬಸವಕಲ್ಯಾಣ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 493 (727)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಪಟ್ಟಣಕ್ಕೆ ಕುಡಿಯುವ ನೀರಿನ ತೀವ್ರ ಅಭಾವವನ್ನು